# ಸೌರಮಂಡಲ ಚಟುವಟಿಕೆ –೧

೫
ಪರಿಸರ ಅಧ್ಯಯನ

**ಪ್ರೇರಣಾ ಕಾಗದ**

**ಹೀಗೆ ಮಾಡಿರಿ:**

* ಸೌರಮಂಡಲದ ಸದಸ್ಯ ಗ್ರಹಗಳ ಹೆಸರು ಬರೆ.
* ಇವುಗಳ ಚಿತ್ರಗಳನ್ನು ದೊಡ್ಡ ರಟ್ಟುಗಳಲ್ಲಿ ಬರೆದು, ಕತ್ತರಿಸಿ, ಹೆಸರು ಬರೆದು, ದಾರದಿಂದ ಕ್ರಮವಾಗಿ ಪೋಣಿಸಿ ತರಗತಿಯಲ್ಲಿ ನೇತುಹಾಕಬಹುದು.



ಹೆಸರು:........................................................................................

ಶಾಲೆ:..........................................................................................



ಪೂರಣ ಯೋಜನ
Poorana 2017-18 Project
is supported by Many
Individual Donors

# ಸೌರಮಂಡಲ ಚಟುವಟಿಕೆ –೨

೫
ಪರಿಸರ ಅಧ್ಯಯನ

**ಪ್ರೇರಣಾ ಕಾಗದ**

**ನಮ್ಮ ಆಶಯ:** ಸೂರ್ಯ–ಚಂದ್ರರ ಕುರಿತಾದ ಕೆಲವು ಕವನಗಳು ಇಲ್ಲಿವೆ. ವಾಚಿಸು. ನೀನೂ ಸೂರ್ಯ/ಚಂದ್ರ/ನಕ್ಷತ್ರ/ ಸೌರಮಂಡಲ ಇತ್ಯಾದಿಗಳ ಕುರಿತು ಪುಟ್ಟ ಪದ್ಯಗಳನ್ನು ರಚಿಸಿ ಹೇಳು. ಕೆಳಗಿನ ಖಾಲಿ ಖಾನೆಯಲ್ಲಿ ಬರೆ. ನಿನ್ನ ಕವನಗಳನ್ನು ನಮಗೂ ಕಳುಹಿಸು.

## ಅರ್ಧ ಚಂದ್ರ

"ದೇವರ ಪೆಪ್ಪರಮೆಂಟೇನಮ್ಮ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟೇನಮ್ಮಾ!"

"ದಿನದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು
ಮತ್ತದು ದಿನದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು

ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ?"
"ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು ಕಂದಯ್ಯ!"

"ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!"

**ಆಕರ : ತಟ್ಟು ಚಪ್ಪಾಳೆ ಪುಟ್ಟ ಮಗು**
**ಕವಿ : ಕುವೆಂಪು**

## ಇವನು ಸೂರ್ಯ

ಉರಿ ಉರೀತ ಬೆಟ್ಟದ ನೆತ್ತೀ ಮೇಲೆ ಕಾಣಿಸ್ತಾನೆ ಸೂರ್ಯ!
ಬೆಳ್ಗಾಯ್ತಪ್ಪಾ ಅಂದ್ರೆ ಅವನು ಹುಟ್ಟೋದು ಅನಿವಾರ್ಯ!
ಬಂಡೇ ಮೇಲಿನ ಹುಂಜಾನೆ ಅವನು ಊದೋ ತೂರ್ಯ!
ತೂರ್ಯ ಕೇಳೀದ ಮೇಲೇ ಶುರು ನಾನಾ ರೀತಿ ಕಾರ್ಯ!

**ಆಕರ : ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ**
**ಕವಿ : ಎಚ್ ಎಸ್. ವೆಂಕಟೇಶ ಮೂರ್ತಿ**